ಯಾವುದರ ಹೆಚ್ಚಿನ ಪ್ರಮಾಣವು ಅಮಲೇರಿಸುತ್ತದೆಯೋ, ಅದರ ಕಡಿಮೆ ಪ್ರಮಾಣವೂ ಹರಾಮ್ (ನಿಷಿದ್ಧ) ಆಗಿದೆ

ಜಾಬಿರ್ ಬಿನ್ ಅಬ್ದುಲ್ಲಾ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರಿಂದ ವರದಿ. ಅವರು
ಹೇಳಿದರು: ಅಲ್ಲಾಹನ ಸಂದೇಶವಾಹಕರು(ಸ) ಹೀಗೆ ಹೇಳುವುದನ್ನು ನಾನು ಕೇಳಿದ್ದೇನೆ: "ಯಾವುದರ ಹೆಚ್ಚಿನ ಪ್ರಮಾಣವು ಅಮಲೇರಿಸುತ್ತದೆಯೋ, ಅದರ ಕಡಿಮೆ ಪ್ರಮಾಣವೂ ಹರಾಮ್ (ನಿಷಿದ್ಧ) ಆಗಿದೆ". [حسن] [رواه أبو داود والترمذي وابن ماجه وأحمد]

ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ವಿವರಿಸುವುದೇನೆಂದರೆ, ಯಾವುದೇ ಪಾನೀಯ ಅಥವಾ ಆಹಾರವು ಅದರ ಹೆಚ್ಚಿನ ಪ್ರಮಾಣವನ್ನು ಸೇವಿಸಿದಾಗ ಬುದ್ಧಿಯ ಸ್ಥಿಮಿತವನ್ನು ತಪ್ಪಿಸುತ್ತದೆಯೋ, ಅದರ ಕಡಿಮೆ ಪ್ರಮಾಣವನ್ನು ಸೇವಿಸುವುದು ಕೂಡ ನಿಷಿದ್ಧವಾಗಿದೆ. ಆ ಕಡಿಮೆ ಪ್ರಮಾಣವು ಬುದ್ಧಿಯ ಸ್ಥಿಮಿತವನ್ನು ತಪ್ಪಿಸದಿದ್ದರೂ ಸಹ.

http://sunnah.global/hadeeth/kn/show/66036